**<u>3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ</u>**

<u>ಎಸ್.ಸಿ.ನಂಃ 263/ 2023</u>

**ಚಾಸಾ-2, ಪ್ರಾಸಾ-2**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಾರದ |
| ಗಂಡನ ಹೆಸರು | : | ಮಂಜುನಾಥ್ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಬಿಟ್ಟಹಳ್ಳಿ, ಹಾಸನ |

**<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದ ದಿನಾಂಕಃ 31.01.2025.</u>**

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1. ಚಾಸಾ-3 ನನ್ನ ಗಂಡ, ಚಾಸಾ-1 ನನ್ನ ಮಗಳು. ಚಾಸಾ-1 ಶುಶ್ರೂಷಕಿ. ಆಕೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ನನಗೆ ಇರುವುದಿಲ್ಲ. 1ನೇ ಆರೋಪಿಯು ಚಾಸಾ-1 ರವರಿಗೆ ಪೋನ್ ಮೂಲಕ ಸಂದೇಶ ಕಳುಹಿಸುತಿತದ್ದ ಬಗ್ಗೆ ಹಾಗೂ ಮಾತನಾಡುತ್ತಿದ್ದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. 1ನೇ ಆರೋಪಿಯು ಚಾಸಾ-1 ರವರನ್ನು ಮದುವೆ ಮಾಡಿಕೊಳ್ಳುತ್ತೇನೆ ಎಂದು ಪ್ರಸ್ತಾಪ ಮಾಡಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. 1ನೇ ಅರೋಪಿಯು ಚಾಸಾ-1 ರವರನ್ನು ಎಲ್ಲಿಗೂ ಕರೆಸಿ, ಯಾವುದೇ ಮನೆಯಲ್ಲಿ ಆಕೆಯ ಇಚ್ಛೆಯ ವಿರುದ್ಧವಾಗಿ ದೈಹಿಕ ಸಂಪರ್ಕ ಮಾಡಿ, ಆ ಸಂದರ್ಭದಲ್ಲಿ ಆ ಖಾಸಗಿ ಕ್ಷಣಗಳ ಪೋಟೋ ಹಾಗೂ ವೀಡಿಯೋ ಚಿತ್ರೀಕರಣ ಮಾಡಿ ನಂತರ ಆಕೆಗೆ ಹಣವನ್ನು ಕೊಡುವಂತೆ ಬೆದರಿಕೆ ಹಾಕಿದ್ದ ಬಗ್ಗೆ ಹಾಗೂ ಇಲ್ಲವಾದರೆ ಸದರಿ ಖಾಸಗಿ ಛಾಯಾಚಿತ್ರ ಹಾಗೂ ವೀಡಿಯೋ ಚಿತ್ರೀಕರಣಗಳನ್ನು ಆತನ ಸ್ನೇಹಿತರಿಗೆ ಕಳುಹಿಸಿದ್ದ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ ಮತ್ತು ಆ ಸಂದರ್ಭದಲ್ಲಿ ಚಾಸಾ-1 ರವರು ಚಾಸಾ-4 ರವರ ಮನೆಗೆ ಹೋಗಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ವೀಡಿಯೋವನ್ನು 2ನೇ ಆರೋಪಿತನ ಮೊಬೈಲ್ ನಲ್ಲಿ ಚಿತ್ರೀಕರಣ ಮಾಡಿರುವ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಈ ಸಂಬಂಧ ಪೊಲೀಸರಿಗೆ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಈಗ ನೋಡುತ್ತಿರುವ

ನಿಪಿ-3 ರ ದಾಖಲೆಯಲ್ಲಿ ನನ್ನ ಸಹಿ ಕಂಡು ಬಂದಿದ್ದು, ಅದನ್ನು ನಿಪಿ-3ಬಿ ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿನ ಸಹಿಯನ್ನು ಪೊಲೀಸರ ಕೋರಿಕೆಯ ಮೇರೆಗೆ ಮಾಡಿರುತ್ತೇನೆ.

(ಈ ಸಂದರ್ಭದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಶೀಲಿಸಿ, ಪಾಟೀಸವಾಲಿಗೆ ಅನುಮತಿ ನೀಡಿದೆ)

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

2. ದಿಃ 22.08.2023 ರಂದು ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ "ನಾನು ಮೇಲೆ ತಿಳಿಸಿರುವ ವಿಳಾಸದಲ್ಲಿ ವಾಸವಾಗಿರುತ್ತೇನೆ ------------------------------------ ------------------------------------------------------------------------------------- ------------------------ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ" ಎಂಬುದಾಗಿ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ ಅದನ್ನು ಸಾಕ್ಷಿಯು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಸದರಿ ಹೇಳಿಕೆಯ ಭಾಗವನ್ನು ನಿಪಿ-8 ಎಂದು ಗುರುತಿಸಲಾಯಿತು. ದಿಃ 25.07.2023 ರಂದು ಚಾಸಾ-1 ರವರನ್ನು ಹಾಸನದ ಸರ್ಕಾರಿ ಆಸ್ಪತ್ರೆಗೆ ವೈದ್ಯಕೀಯ ಪರೀಕ್ಷೆಗಾಗಿ ಕರೆ ತಂದಾಗ ನಾನು ಆಕೆಯ ಜೊತೆ ಇದ್ದು, ನಿಪಿ-3 ರಂತೆ ವೈದ್ಯಕೀಯ ಪರೀಕ್ಷೆಗಾಗಿ ಒಪ್ಪಿ, ಸಹಿಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣ ಸಂಬಂಧ ನಿಪಿ-8 ರಂತೆ ಆರೋಪಿತರ ವಿರುದ್ಧ ಹೇಳಿಕೆಯನ್ನು ನೀಡಿದ್ದರೂ ಸಹ ಹಾಗೂ ನಿಪಿ-3 ರ ದಾಖಲೆಯಲ್ಲಿ ಒಪ್ಪಿ ಸಹಿ ಮಾಡಿದ್ದರೂ ಸಹ, ಆರೋಪಿತರಿಗೆ ಶಿಕ್ಷೆಯಾಗುವುದನ್ನು ತಪ್ಪಿಸಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆಪಾದಿತರ ಪರ ಶ್ರೀ ವಿ.ಎಂ ವಕೀಲರಿಂದಃ**

ಆರೋಪಿಗಳ ಪರ ಯಾವುದೇ ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಸಮಕ್ಷಮ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,

ಹಾಸನ.